

# ಅರಳು ಕಂಗಳಲ್ಲಿ ಸಿನಿಮಾ ಹೊಳಪು

**ಕಲಾ ಕುಟುಂಬದ ಕುಡಿ ಕೀರ್ತಿ ಕೃಷ್ಣ ಕನ್ನಡ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದ್ದಾರೆ. ಸಿನಿಮಾ ತಾರೆಯರಾದ ಶ್ರುತಿ, ಶರಣ್ ಸೋದರಿಯ ಪುತ್ರಿ ಕೀರ್ತಿ, ಎರಡು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಅರಳು ಕಂಗಳ ಈ ಸುಂದರಿ, 'ಸುಧಾ' ಜೊತೆ ಮಾತನಾಡಿದ್ದಾರೆ.**

■ ಸುಮಲತಾ ಎನ್.

◆ **ಕಲಾ ಕುಟುಂಬದಲ್ಲೇ ಬೆಳೆದಿರುವ ನಿಮಗೆ ಸಿನಿಮಾರಂಗದ ಪ್ರವೇಶ ಹೇಗನ್ನಿಸುತ್ತಿದೆ?**

ಕಲೆಯನ್ನೇ, ನಟನೆಯನ್ನೇ ಆರಾಧಿಸುತ್ತಾ ಬಂದಿರುವ ಕುಟುಂಬ ನಮ್ಮದು. ಸಿನಿಮಾರಂಗ ಹೊಸತೇನಲ್ಲ. ಆದರೆ ಒಂದು ಜವಾಬ್ದಾರಿಯನ್ನು ಮನಸ್ಸಲ್ಲಿಟ್ಟುಕೊಂಡೇ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಾಗುತ್ತದೆ. ಕಲೆ, ನಟನೆ ನಮ್ಮ ವೃತ್ತಿ. ನಮ್ಮ ಕುಟುಂಬದ ಬೇರನ್ನು ಬಿಡದೇ ಮುಂದುವರೆಸಿಕೊಂಡು ಹೋಗಬೇಕು, ನಮ್ಮ ಕುಟುಂಬದ ಪರಂಪರೆಯನ್ನು ಮುಂದೆ ತೆಗೆದುಕೊಂಡು ಹೋಗಬೇಕು ಎನ್ನುವ ಆಸೆ.

ಚಿಕ್ಕವಯಸ್ಸಿನಿಂದಲೇ ಸಿನಿಮಾರಂಗವನ್ನು ನೋಡಿಕೊಂಡೇ ಬೆಳೆದವಳು. ನಟನೆ ನಮ್ಮ ರಕ್ತದಲ್ಲೇ ಇದೆ. ಹೀಗಾಗಿ ಬೇರೆ ಕ್ಷೇತ್ರಗಳ ಬಗ್ಗೆ ಆಸೆ ಹುಟ್ಟಲೇ ಇಲ್ಲ. ಈಗ ಸಿನಿಮಾರಂಗಕ್ಕೆ ಎಂಟ್ರಿ ಕೊಟ್ಟಿದ್ದೇನೆ.

◆ **ಬಾಲ ನಟಿಯಾಗಿ ಅಭಿನಯಿಸಿದ ಅನುಭವ?**

2010ರಲ್ಲಿ ನನ್ನ ದೊಡ್ಡಮ್ಮ ಶ್ರುತಿ ಅವರೊಂದಿಗೆ 'ಶ್ರೀ ನಾಗಶಕ್ತಿ' ಎಂಬ ಸಿನಿಮಾದಲ್ಲಿ ನಟಿಸಿದ್ದೆ. ಅದರಲ್ಲಿ ನನ್ನ ನಟನೆಗೆ ಬಹಳ ಮೆಚ್ಚುಗೆ ವ್ಯಕ್ತವಾಗಿತ್ತು. ಅದಾಗುತ್ತಿದ್ದಂತೆ ಹಲವು ಅವಕಾಶಗಳು ಬಂದವು. ನನ್ನ ಶಿಕ್ಷಣ ಮುಗಿಸಿ ಈ ಕ್ಷೇತ್ರದತ್ತ ಬರಬೇಕೆಂಬ ಯೋಜನೆಯಿತ್ತು. ಪದವಿ ಮುಗಿದ ನಂತರ ಈಗ ಸಿನಿಮಾರಂಗಕ್ಕೆ ಎಂಟ್ರಿ ಕೊಟ್ಟಿದ್ದೇನೆ. ಸದ್ಯ ಎರಡು ಸಿನಿಮಾಗಳಲ್ಲಿ ನಟಿಸುತ್ತಿದ್ದೇನೆ.

◆ **ಸಿನಿಮಾರಂಗಕ್ಕೆ ಬಂದಿರುವ ನಿಮಗೆ ಮನೆಯವರ ಕಿವಿಮಾತು ಏನಾಗಿತ್ತು?**

ಮನೆಯಲ್ಲಿ ನಮ್ಮ ಪ್ರತಿ ಮಾತುಗಳಲ್ಲಿಯೂ ಸಿನಿಮಾ ಇದ್ದೇ ಇರುತ್ತದೆ. ದೊಡ್ಡಮ್ಮ ಶ್ರುತಿ, ಮಾಮ ಶರಣ್ ಅವರು ಸಲಹೆಗಳನ್ನು ನೀಡುತ್ತಲೇ ಇರುತ್ತಾರೆ. ಸಿನಿಮಾ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೇವೆ ಎಂದರೆ ಮೊದಲು ಶಿಸ್ತು ರೂಢಿಸಿಕೊಳ್ಳಬೇಕು, ಇಲ್ಲಿಗೆ ಬಂದ ಮೇಲೆ ಹಿಂದೆ ತಿರುಗಿ ನೋಡುವ ಮಾತಿಲ್ಲ. ಹೀಗಾಗಿ ಇಲ್ಲಿ ಉಳಿಯಬೇಕಾದರೆ ಬದ್ಧತೆಯಿಂದ ಇರುವುದು ಬಹಳ ಮುಖ್ಯ ಎಂದು ಸಲಹೆ ನೀಡಿದ್ದರು. ನಟನೆ ಎಂದರೆ ಕ್ಯಾಮೆರಾ ಮುಂದೆ ಬಂದು ಅಭಿನಯಿಸಿ ಹೋಗುವುದು ಮಾತ್ರವಲ್ಲ, ಒಳ್ಳೆಯ ಕಲಾವಿದರು ಅನ್ನಿಸಿಕೊಳ್ಳಬೇಕಾದರೆ ಒಳ್ಳೆಯ ವ್ಯಕ್ತಿಯೂ ಆಗಬೇಕು ಎಂಬುದು ಅವರ ಮಾತು. ತುಂಬಾ ಇನ್‌ಪುಟ್‌ಗಳನ್ನು ಕೊಡುತ್ತಲೇ ಇರುತ್ತಾರೆ.

◆ **ನಟನೆಯ ಅಭ್ಯಾಸ ಹೇಗೆ ಆರಂಭವಾಯಿತು?**

ನಮ್ಮ ಮನೆಯೇ ಒಂದು ಇನ್‌ಸ್ಟಿಟ್ಯೂಷನ್‌ನಂತಿತ್ತು. ಆ ಕಡೆ ದೊಡ್ಡಮ್ಮ, ಮಾಮ, ತಾತ, ಅಜ್ಜಿ, ನನ್ನ ಮುತ್ತಾತ ಮುತ್ತಜ್ಜಿ ಹೀಗೆ ಮೂರ್ನಾಲ್ಕು ತಲೆಮಾರಿನಿಂದಲೂ ನಟನೆಯೇ ನಮ್ಮ ಜೊತೆ ಇದ್ದಿದ್ದರಿಂದ ನಟನೆ ಬಿಟ್ಟು ಬೇರೆ ಆಲೋಚನೆ ಇರಲಿಲ್ಲ. ನಟನೆಗೆಂದು ಹೆಚ್ಚುವರಿ ಕೋರ್ಸ್ ಮಾಡಲು ಹೋಗಲಿಲ್ಲ. ಮನೆಯಲ್ಲೇ ಉತ್ತಮ ಮಾಹಿತಿ, ತರಬೇತಿ ಸಿಕ್ಕಿತ್ತು. ಇದರ ಹೊರತಾಗಿ ನಾಲ್ಕು ತಿಂಗಳು ನಾಟಕದ ಕೋರ್ಸ್ ಮಾಡಿದ್ದೆ.

◆ **ನೀವು ನಟಿಸುತ್ತಿರುವ ಸಿನಿಮಾಗಳು ಹಾಗೂ ಪಾತ್ರಗಳ ಕುರಿತು...**